**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಶಾಲನಗರ.**

**ಉಪಸ್ಥಿತರು : ಶ್ರೀಮತಿ ಚೈತ್ರ ಎಲ್, ಬಿ.ಬಿ.ಎಂ. ಎಲ್.ಎಲ್.ಬಿ .,**
**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂಎಫ್‌ಸಿ,**
**ಕುಶಾಲನಗರ**

**ದಿನಾಂಕಃ 6 ನೇ ಏಪ್ರಿಲ್ 2026**

**ಸಿ.ಸಿ. ನಂ: 795/2024**

**ಪಿರ್ಯಾದುದಾರರು** : ಕರ್ನಾಟಕ ಸರ್ಕಾರದ ಪರವಾಗಿ
ಕುಶಾಲನಗರ ನಗರ ಪೊಲೀಸ್ ಠಾಣೆ.

(ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿ: ಕುನಾಲ್ ಚೆಂಗಪ್ಪ
ತಂದೆ: ಮೋಹನ್ ಕುಮಾರ್ ಕೆ.ಆರ್
35 ವರ್ಷ,
ವಾಸ: ಕೆ.ಸಿ.ಪಿ ಚಿಕನ್ ಮಾಲೀಕ ,
ಕುಶಾಲನಗರ.

(**ಪ್ರತಿನಿಧಿಸುವವರು ಶ್ರೀ.ಕೆ.ಸಿ. ಶಿವಮೂರ್ತಿ, ವಕೀಲರು**)

**::ತೀರ್ಪು::**

ಪೋಲಿಸ್ ಉಪ ನಿರೀಕ್ಷಕರು, ಕುಶಾಲನಗರ ನಗರ ಪೊಲೀಸ್ ಠಾಣೆ ಇವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 324, 504 ಮತ್ತು 506 ರಡಿಯಲ್ಲಿ ದೋಷಾರೋಪಣಪತ್ರ ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:**

ದಿನಾಂಕ 04.03.2024 ರಂದು ಸಮಯ ರಾತ್ರಿ 8.30 ಪಿ.ಎಂ.ಗೆ ಕುಶಾಲನಗರ ಹಳೆ ಮಾರ್ಕೆಟ್ ನ ಚಾಸಾ 3 ರವರ ಅಂಗಡಿಯ ಮುಂಭಾಗದಲ್ಲಿ ಚಾಸಾ 1 ರವರು ಆರೋಪಿಯ ಬಳಿ ಸಂಬಳದ ಹಣವನ್ನು ಕೇಳಲು ಹೋದಾಗ ಚಾಸಾ 1 ರವರಿಗೆ ಆರೋಪಿಯು ನೀನು ಸರಿಯಾಗಿ ಕೆಲಸಕ್ಕೆ ಬರುವುದಿಲ್ಲ ನಿನಗೆ ಸಂಬಳ ಬೇಕಾ ಸೂಳೇ ಮಗನೆ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು, ಅಲ್ಲೇ ಇದ್ದ ಕಬ್ಬಿಣದ ಸ್ಟೇರ್ ಪೈಪಿನಿಂದ ಚಾಸಾ 1 ರವರ ಎಡತೋಳಿಗೆ ಬಲಕಾಲಿನ ಮಂಡಿ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುವುದಲ್ಲದೇ, ನಿನ್ನನ್ನು ಜೀವನ ಮಾಡಲು ಬಿಡುವುದಿಲ್ಲ ಎಂಬುವುದಾಗಿ ಕೊಲೆ ಬೆದರಿಕೆ ಹಾಕಿರುವುದು ತನಿಖೆ ನಡೆಸಿರುವ ಕುಶಾಲನಗರ ನಗರ ಪೋಲಿಸ್ ಠಾಣೆಯವರು ಆರೋಪಿಯ ವಿರುದ್ದ ದೋಷಾ ರೋಪಣಾಪತ್ರವನ್ನು ಸಲ್ಲಿಸಿರುತ್ತಾರೆ.

3. ಆರೋಪಿಯ ವಿರುದ್ದ ಪ್ರಥಮ ವರ್ತಮಾನವನ್ನು ದಾಖಲಾದ ನಂತರ ಕುಶಾಲನಗರ ನಗರ ಪೋಲೀಸರು ಪ್ರಕರಣದ ತನಿಖೆ ನಡೆಸಿ ಆರೋಪಿಯ ವಿರುದ್ದ ದೋಷಾರೋಪಣಾಪತ್ರವನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ, ತದನಂತರ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯ ಅಂಶಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆರೋಪಿಯ ಮೇಲಿನ ಆರೋಪವು ಕಂಡು ಬಂದ ಕಾರಣದಿಂದ ನ್ಯಾಯಾಲಯವು ದಂಡ ಪ್ರಕ್ರಿಯಾ

ಸಂಹಿತೆ ಕಾಯಿದೆ 190 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿಗೆ ಸಮನ್ಸ್ ಜಾರಿ ಮಾಡಿರುತ್ತದೆ. ಆರೋಪಿಯು ನ್ಯಾಯಾಲಯದಲ್ಲಿ ತಮ್ಮ ವಕೀಲರ ಮೂಲಕ ಹಾಜರಾಗಿದ್ದು ಜಾಮೀನು ಪಡೆದುಕೊಂಡಿರುತ್ತಾರೆ, ಅವರಿಗೆ ಅದೇ ದಿನ ದಂಡ ಪ್ರಕ್ರಿಯ ಸಂಹಿತೆ ಕಲಂ 207 ರ ಪ್ರಕಾರ ಸಂಪೂರ್ಣವಾದ ದೋಷಾರೋಪಣಾ ಪಟ್ಟಿಯ ದಾಖಲೆಗಳನ್ನು ಒದಗಿಸಿರುತ್ತದೆ. ತದನಂತರದಲ್ಲಿ ಆರೋಪಿಯ ವಿರುದ್ದ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಿದ್ದು, ಅವರುಗಳು ತಾ೬ಣ ಯಾವುದೇ ತಪ್ಪು ಮಾಡಿಲ್ಲವೆಂದು ವಿಚಾರಣೆ ಆಗ ಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಆದಕಾರಣದಿಂದ ಪ್ರಕರಣದ ವಿಚಾರಣೆ ಕಾಯ್ದಿರಿಸಲಾಯಿತು.

4. ಅಭಿಯೋಜನಾಪಕ್ಷದವರು ತಮ್ಮ ಪ್ರಕರಣವನ್ನು ಸಾಬೀತು ಪಡಿಸುವ ಉದ್ದೇಶದಿಂದ ದೋಷಾರೋಪಣಾಪತ್ರದಲ್ಲಿ ತಿಳಿಸಿರುವ ಸಾಕ್ಷಿದಾರರಾದ ಚಾಸಾ–2 ರವರನ್ನು ಪ್ರಾಸಾ–1 ಎಂದು, ಚಾಸಾ 3 ರವರನ್ನು ಪ್ರಾಸಾ 2 ಎಂದು, ಚಾಸಾ 4 ರವರನ್ನು ಪ್ರಾಸಾ 3 ಎಂದು, ಚಾಸಾ 5 ರವರನ್ನು ಪ್ರಾಸಾ 4 ಎಂದು, ಚಾಸಾ 1 ರವರನ್ನು ಪ್ರಾಸಾ 1 ಎಂದು ಹಾಜರುಪಡಿಸಿ ವಿಚಾರಣೆಗೆ ಒಳಪಡಿಸಿರುತ್ತಾರೆ ಹಾಗೂ ನಿಪಿ–1 ರಿಂದ ನಿಪಿ–6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು ನ್ಯಾಯಾಲಯದಲ್ಲಿ ಪ್ರಾಸಾ 1 ರಿಂದ ಪ್ರಾಸಾ 5 ರವರು ಅಭಿಯೋಜನೆಯ ಪ್ರಕರಣದ ವಿರುದ್ದವಾಗಿ ಸಾಕ್ಷ್ಯ ನೀಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯವಾಗುವುದಿಲ್ಲವೆಂದು ಕಂಡು ಬಂದ ಕಾರಣ ಅವರುಗಳ ಉಳಿದ ಸಾಕ್ಷ್ಯ ವಿಚಾರಣೆಯನ್ನು

ಅಭಿಯೋಜಕರು ಕೈ ಬಿಟ್ಟಿರುತ್ತಾರೆ.

5. ಅಭಿಯೋಜನೆಯ ಪ್ರಮುಖ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ವನ್ನು ನೀಡಿರುವುದರಿಂದ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಗಳನ್ನು ಪ್ರಶ್ನಿಸಿ ಅವರ ಹೇಳಿಕೆಗಳನ್ನು ದಾಖಲಿಸಿ ಕೊಂಡಿರುವುದಿಲ್ಲ. ಪ್ರಾಸಾ 1 ರಿಂದ ಪ್ರಾಸಾ 5 ರವರು ನ್ಯಾಯಾಲಯದ ಮುಂದೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವುದರಿಂದ ಮುಖ್ಯ ವಾದಮಂಡನೆಗೆ ಪ್ರಕರಣವನ್ನು ಕಾಯ್ದಿರಿಸಿಕೊಳ್ಳಲಾಯಿತು.

6. ದೋಷಾರೋಪಣೆಯ ಅಂಶಗಳನ್ನು ಮತ್ತು ಅಭಿ ಯೋಜನೆಯ ಪರ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ನನ್ನ ಗಮನಕ್ಕೆ ಈ ಕೆಳಕಂಡ ಅಂಶಗಳು ಮೂಡಿ ಬಂದಿರುತ್ತವೆ:

**ಃಅಂಶಗಳುಃ**

**ಅಂಶ.1:** ದಿನಾಂಕ 04.03.2024 ರಂದು ಸಮಯ ರಾತ್ರಿ 8.30 ಪಿ.ಎಂ.ಗೆ ಕುಶಾಲನಗರ ಹಳೆ ಮಾರ್ಕೆಟ್ ನ ಚಾಸಾ 3 ರವರ ಅಂಗಡಿಯ ಮುಂಭಾಗದಲ್ಲಿ ಚಾಸಾ 1 ರವರು ಆರೋಪಿಯ ಬಳಿ ಸಂಬಳದ ಹಣವನ್ನು ಕೇಳಲು ಹೋದಾಗ ಚಾಸಾ 1 ರವರಿಗೆ ಆರೋಪಿಯು ನೀನು ಸರಿಯಾಗಿ ಕೆಲಸಕ್ಕೆ ಬರುವುದಿಲ್ಲ ನಿನಗೆ ಸಂಬಳ ಬೇಕಾ ಸೂಳೇ ಮಗನೆ ಎಂದು ಅವ್ಯಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ **ಅಭಿಯೋಜಕರು** ಭಾ.ದಂ.ಸಂ.ಕಲಂ.504 ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

**ಅಂಶ.2:** ಅದೇದಿನ, ಅದೇಸ್ಥಳ, ಅದೇ ಸಮಯದಲ್ಲಿ ಆರೋಪಿಯು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಅಲ್ಲೇ ಇದ್ದ ಕಬ್ಬಿಣದ ಸ್ಟೇರ್ ಪೈಪಿನಿಂದ ಚಾಸಾ 1 ರವರ ಎಡತೋಳಿಗೆ ಬಲಕಾಲಿನ ಮಂಡಿ ಹಿಂಭಾಗಕ್ಕೆ ಹೊಡೆದು

ಸಾಮಾನ್ಯ ಸ್ವರೂಪದ ಗಾಯಪಡಿಸಿದ ಬಗ್ಗೆ ಅಭಿಯೋಜಕರು ಭಾ.ದಂ.ಸಂ.ಕಲಂ 324 ರಡಿಯಲ್ಲಿ ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

**ಅಂಶ.3:** ಅದೇದಿನ, ಅದೇಸ್ಥಳ, ಅದೇ ಸಮಯದಲ್ಲಿ ಆರೋಪಿಯು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ನಿನ್ನನ್ನು ಜೀವನ ಮಾಡಲು ಬಿಡುವುದಿಲ್ಲ ಎಂಬುವುದಾಗಿ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ಅಭಿಯೋಜಕರು ಭಾ.ದಂ.ಸಂ.ಕಲಂ 506 ರಡಿಯಲ್ಲಿ ಅಡಿಯಲ್ಲಿ ಯುಕ್ತ ಸಂದೇಹಕ್ಕಿಂತ ಮೇಲಾಗಿ ಸಾಬೀತುಪಡಿಸಿದ್ದಾರೆಯೇ?

**ಅಂಶ.4 :** ಯಾವ ಆದೇಶ?

7. ಅಭಿಯೋಜನೆಯ ಪಕ್ಷದ ಪರವಾಗಿ ಸಹಾಯಕ ಸರ್ಕಾರಿ ವಕೀಲರ ವಾದವನ್ನು ಕೇಳಲಾಯಿತು, ಅದೇ ರೀತಿ ಆರೋಪಿಯ ಪರವಾಗಿ ಆರೋಪಿಯ ಪರ ವಕೀಲರ ವಾದವನ್ನು ಕೇಳಲಾಯಿತು ಮತ್ತು ನ್ಯಾಯಾಲಯದ ಮುಂದಿರುವ ಸಂಪೂರ್ಣ ಕಡತವನ್ನು ಪರಿಶೀಲಿಸ ಲಾಯಿತು. ಪಿರ್ಯಾದುದಾರರ ಎಲ್ಲಾ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

**ಅಂಶ.1: ನಕರಾತ್ಮಕವಾಗಿ**
**ಅಂಶ.2: ನಕರಾತ್ಮಕವಾಗಿ**
**ಅಂಶ.3: ನಕರಾತ್ಮಕವಾಗಿ**
**ಅಂಶ.4:** ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ಅಂತಿಮ ಆದೇಶದಂತೆ

***: ಕಾರಣಗಳು :***

8. **ಅಂಶ 1 ರಿಂದ 3 :-**ಅಂಶ 1 ರಿಂದ 3 ಒಂದನ್ನೊಂದು ಅವಲಂಬಿಸಿರುತ್ತದೆ ಹಾಗೂ ಅವುಗಳನ್ನು ಉತ್ತರಿಸುವಾಗ ಒಂದೇ ರೀತಿ ಆದಂತಹ ಚರ್ಚೆ, ವಿಮರ್ಶೆ ಅವಶ್ಯಕತೆ ಇರುತ್ತದೆ, ಹಾಗೂ ಅವು ಗಳಿಂದ ಪುನರಾವರ್ತನೆಯನ್ನು ತಡೆಗಟ್ಟುವ ಸಲುವಾಗಿ ಈ ನಾಲ್ಕು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಆರೋಪಿಯ ವಿರುದ್ದ ಹೊರಿಸಲಾದ ಆರೋಪವನ್ನು ಸಾಬೀತುಪಡಿಸಲು ಅಭಿಯೋಜನೆಯವರು ಚಾಸಾ 1 ರಿಂದ ಚಾಸಾ 3 ರವರನ್ನು ವಿಚಾರಣೆಗೆ ಒಳಡಿಸಿರುತ್ತಾರೆ. ಈ ಪ್ರಕರಣದ ಪಿರ್ಯಾದುದಾರರಾದ ಪ್ರಾಸಾ 1 ಮುಜೀಬ್ ಎಂ.ಜೆ, ಪ್ರಾಸಾ 2 ಮುಬೀನ್ ಹಾಗೂ ಪ್ರಾಸಾ 3 ಪವನ್ ಹೆಚ್ ಆರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾವುಗಳು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ, ಪೋಲಿಸರು ತಮ್ಮನ್ನು ವಿಚಾರಣೆ ಮಾಡಿರುವುದಿಲ್ಲ ಹಾಗೂ ಈ ಪ್ರಕರಣದ ವಿಚಾರಗಳು ತನಗೇನು ಗೊತ್ತಿರುವುದಿಲ್ಲ ಎಂದು ತಮ್ಮ ಮುಖ್ಯ ವಿಚಾರಣೆಗಳಲ್ಲಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರುಗಳು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದಾಗ ನಿರಾಕರಿಸಿದ ಹೇಳಿಕೆಯ ಭಾಗಗಳನ್ನು ನಿಪಿ 1 ರಿಂದ ನಿಪಿ 3 ಎಂದು ಗುರುತಿಸಲಾಯಿತು. ಸದರಿ ಅಂಶಗಳನ್ನು ಪರಿಶೀಲಿಸಿದಾಗ ಪ್ರತ್ಯಕ್ಷ ಸಾಕ್ಷಿಗಳೆ ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದು ಕಂಡು ಬಂದಿರುತ್ತದೆ.

10. ಪ್ರಾಸಾ 4 ಪವನ್ ಹೆಚ್. ಆರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ 4 ನ್ನು ತಾನು ಸುಮಾರು ಒಂದೂವರೆ ವರ್ಷದ ಹಿಂದೆ ಪೋಲಿಸರ ಹೇಳಿಕೆಯ ಮೇರೆಗೆ ಒಂದು ದಾಖಲೆಯ ಮೇಲೆ ಸಹಿ ಮಾಡಿದ್ದು, ನಿಪಿ 4 ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೆ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾವುದೆ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ. ಪೋಲಿಸರು ತನ್ನನ್ನು ವಿಚಾರಣೆ ಮಾಡಿಲ್ಲ ಹಾಗೂ ತಾನು ಯಾವುದೆ ಹೇಳಿಕೆ ಕೊಟ್ಟಿಲ್ಲ ಹಾಗೂ ಈ ಪ್ರಕರಣದ ವಿಚಾರ ತಮಗೆ ಗೊತ್ತಿಲ್ಲ ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರು ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುವ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದಾಗ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 5 ಎಂದು ಗುರುತಿಸಲಾಯಿತು . ಸದರಿ ಅಂಶಗಳನ್ನು ಪರಿಶೀಲಿಸಿದಾಗ ಮಹಜರು ಸಾಕ್ಷಿದಾರರು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದು ಕಂಡು ಬಂದಿರುತ್ತದೆ.

11. ಪ್ರಾಸಾ 4 ರಾಜಶೇಖರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸುತ್ತಾ, ಸಾಕ್ಷಿಯು ದೂರು ಮತ್ತು ಪಂಚನಾಮೆಯನ್ನು ಗುರುತಿಸಿದ್ದು, ನಿಪಿ 4 ಮತ್ತು 6 ರಲ್ಲಿರುವ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೆ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಆ ಸಮಯದಲ್ಲಿ ಯಾವುದೆ ಛಾಯಚಿತ್ರಗಳನ್ನು ತೆಗೆದುಕೊಂಡಿರುವುದಿಲ್ಲ ಹಾಗೂ ಯಾವುದೆ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ . ಆರೋಪಿಯು

ತನ್ನ ಮೇಲೆ ಯಾವುದೆ ಹಲ್ಲೆ ಮಾಡಿರುವುದಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರವುದಿಲ್ಲ. ಈ ಪ್ರಕರಣದ ವಿಚಾರ ತನಗೆ ಗೊತ್ತಿಲ್ಲ. ಪೋಲಿಸರ ಮುಂದೆ ತಾನು ಯಾವುದೆ ಹೇಳಿಕೆಯನ್ನು ನೀಡಿರುವುದಿಲ್ಲ. ಹಲ್ಲೆಯ ಹಿನ್ನಲೆಯಲ್ಲಿ ತಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಸದರಿ ಅಂಶಗಳನ್ನು ಪರಿಶೀಲಿಸಿದಾಗ ಪಿರ್ಯಾದಿಯೇ ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ ಎಂದು ಕಂಡು ಬಂದಿರುತ್ತದೆ.

12. ಪ್ರಾಸಾ-1 ರಿಂದ ಪ್ರಾಸಾ 5 ರವರು ತಮ್ಮ ಮುಖ್ಯ ವಿಚಾರಣೆಗಳಲ್ಲಿ ಅಭಿಯೋಜನೆಯ ಪ್ರಕರಣದ ವಿರುದ್ದ ಸಾಕ್ಷ್ಯ ನುಡಿದ ಕಾರಣ ಸದರಿ ಸಾಕ್ಷಿಗಳನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಂಪೂರ್ಣ ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಪಾಟೀಸವಾಲು ಮಾಡಿದಾಗಲೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಪ್ರಾಸಾ-1 ರಿಂದ ಪ್ರಾಸಾ 5 ರವರು ನುಡಿದಿರುವುದಿಲ್ಲ ಹಾಗೂ ನಿಪಿ-4 ಮತ್ತು ನಿಪಿ 6 ರಲ್ಲಿರುವ ಸಂಗತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಪ್ರಾಸಾ 1 ರಿಂದ ಪ್ರಾಸಾ 5 ರವರ ಸಾಕ್ಷ್ಯವನ್ನು ನಂಬುವಲ್ಲಿ ಸಂಶಯವನ್ನುಂಟು ಮಾಡುತ್ತದೆ.

13. ಈ ಪ್ರಕರಣದ ದೂರುದಾರರು, ಮಹಜರ್ ಮತ್ತು ಪ್ರತ್ಯಕ್ಷ್ ಸಾಕ್ಷಿದಾರರುಗಳು ಈ ಕೇಸಿಗೆ ಸಂಬಂಧಿಸಿದಂತೆ ಪೂರಕವಾದ ಯಾವುದೇ ಅಂಶವನ್ನು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದಿಲ್ಲ. ಈ ಮೇಲ್ಕಂಡ ಕಾರಣಗಳಿಂದ ಆರೋಪಿಯು ಮೇಲ್ಕಂಡ ಆರೋಪಗಳನ್ನು

ಮಾಡಿರುತ್ತಾರೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ನಂಬಲಾರ್ಹವಾದ ಹಾಗೂ ಕಾನೂನುಬದ್ದವಾದ ಸಾಕ್ಷ್ಯಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಲಾಗಿರುತ್ತದೆ ಮತ್ತು ಅಂಶ–1 ರಿಂದ 3 ಅನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

14. **ಅಂಶ.4:** ಅಂಶ 1 ರಿಂದ 3 ಕ್ಕೆ ನೀಡಿರುವ ವಿವರವಾದ ಚರ್ಚೆ ಮತ್ತು ಅವುಗಳಿಗೆ ನೀಡಿರುವ ಕಾರಣಗಳಿಗೆ ಅಂಶ.4 ಕ್ಕೆ ಈ ಕೆಳಗಿನಂತೆ ಆದೇಶ ಮಾಡುತ್ತೇನೆ.

**:ಆದೇಶ :**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸಿ ಆರೋಪಿಯ ವಿರುದ್ದ ಆರೋಪಿಸಲಾದ ಭಾರತೀಯ ದಂಡ ಸಂಹಿತೆ ಕಲಂ 324, 504 ಮತ್ತು 506 ರ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರಪರಾಧಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಯು ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಈ ದಿನದಿಂದ 6 ತಿಂಗಳವರೆಗೆ ಮುಂದುವರೆಸಲಾಗಿದೆ.

ಸ್ವತ್ತು ಪಟ್ಟಿ ಸಂಖ್ಯೆ 25/2024 ದಿನಾಂಕ 7.3.2024 ರಂದು ಸುಮಾರು 3 ಇಂಚು ಅಗಲ ಹಾಗೂ 1 1/2 ಅಡಿ ಉದ್ದವಿರುವ ಜಿಐ ಸ್ಕ್ವೈರ್ ಪೈಪು ಅನುಪಯುಕ್ತ ವಸ್ತುವಾದ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲದಲ್ಲಿ ದಿನಾಂಕ 6 ನೇ ಏಪ್ರಿಲ್ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

**ಸಹಿ/-**
**(ಚೈತ್ರ ಎಲ್, )**
**ಸಿವಿಲ್ ನ್ಯಾಯಾಧೀಶರು**
**ಮತ್ತು.ಜೆ.ಎಂ.ಎಫ್.ಸಿ, ಕುಶಾಲನಗರ**

**::ಅನುಬಂಧ:**

**1. ಆಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :**

ಪ್ರಾಸಾ–1 : ಮುಜೀಬ್ ಎಂ.ಜೆ.
ಪ್ರಾಸಾ–2 : ಮುಬೀನ್
ಪ್ರಾಸಾ–3 : ಪವನ್ ಹೆಚ್.ಆರ್
ಪ್ರಾಸಾ–4 : ಸಾಧಿಕ್
ಪ್ರಾಸಾ–5 : ರಾಜಶೇಖರ್ ಎನ್.

**2. ಅಭಿಯೋಜನಾ ಪರ ಹಾಜರುಪಡಿಸಿದ ದಾಖಲೆಗಳು:**

ನಿಶಾನೆ ಪಿ.1 : ಪ್ರಾಸಾ–1 ರವರ ಹೇಳಿಕೆ
ನಿಶಾನೆ ಪಿ.2 : ಪ್ರಾಸಾ–2 ರವರ ಹೇಳಿಕೆ
ನಿಶಾನೆ ಪಿ.3 : ಪ್ರಾಸಾ–3 ರವರ ಹೇಳಿಕೆ
ನಿಶಾನೆ ಪಿ4 : ಮಹಜರು
ನಿಶಾನೆ ಪಿ.4(ಎ) : ಪ್ರಾಸಾ–2 ರವರ ಸಹಿ
ಶಾನೆ ಪಿ.4() : ಪ್ರಾಸಾ–2 ರವರ ಸಹಿ
ನಿಶಾನೆ ಪಿ.5 : ಪ್ರಾಸಾ–4 ರವರ ಹೇಳಿಕೆ
ನಿಶಾನೆ ಪಿ.6 : ದೂರು
ನಿಶಾನೆ ಪಿ.6(ಎ) : ಪ್ರಾಸಾ–1 ರವರ ಸಹಿ

**3. ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು:ಇಲ್ಲ–**

**4. ಆರೋಪಿತರ ಪರ ಹಾಜರುಪಡಿಸಿದ ದಾಖಲೆಗಳು: ಇಲ್ಲ–**

**5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೇಮಾಲುಗಳು : ಇಲ್ಲ–**

ಸಹಿ/–

**(ಚೈತ್ರ ಎಲ್)**
**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕುಶಾಲನಗರ**